# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 1636/2022

ಪ್ರಾಸಾ–05, ಚಾಸಾ–04

| | | |
|---|---|---|
| ಸಾಕ್ಷಿದಾರರ ಹೆಸರು | : | ಇಸ್ಮಾಯಿಲ್ ಕಾಲೇಖಾನ್ |
| ತಂದೆಯ ಹೆಸರು | : | ಅಬ್ದುಲ್ ಲತೀಫ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ, ಗುಂಡ್ಲುಪೇಟೆ ಪೊಲೀಸ್ ಠಾಣೆ |
| ವಾಸ | : | ಗುಂಡ್ಲುಪೇಟೆ |

ಸಾಕ್ಷಿಗೆ ದಿನಾಂಕಃ 03.08.2024ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2018 ರಿಂದ 2023ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 22.01.2021ರಂದು ಸಂಜೆಃ 4.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–5ರವರು ಚಾಸಾ–1ರವರ ಜೊತೆ ಕಟ್ನವಾಡಿ ಗ್ರಾಮದ ಕಡೆ ಗಸ್ತು ತಿರುಗುತ್ತಿದ್ದಾಗ, ಬಂದ ಮಾಹಿತಿ ಏನೆಂದರೆ, ಕಟ್ನವಾಡಿ ಗ್ರಾಮದ ಮುಂದೆ ಮಹದೇಶ್ವರ ದೇವಸ್ಥಾನದ ಹತ್ತಿರ ಯಾರೋ ಒಬ್ಬ ವ್ಯಕ್ತಿಯೂ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ತುಂಬಿಕೊಂಡು ನಿಂತಿದ್ದಾನೆ ಎಂದು ಗೊತ್ತಾದ ನಂತರ ಸದರಿ ಮಾಹಿತಿಯನ್ನು ಚಾಸಾ–1ರವರು ನಮಗೆ ತಿಳಿಸಿ, ಕಟ್ನವಾಡಿ ಗ್ರಾಮದ ಕಡೆ ಹೊರಟು ಕಟ್ನವಾಡಿ ಗ್ರಾಮದ ಇಬ್ಬರೂ ಪಂಚರಾದ ಚಾಸಾ–2 ಮತ್ತು 3ರವರನ್ನು ಕರೆದುಕೊಂಡು, ಸದರಿ ಮಾಹಿತಿಯನ್ನು ಪಂಚರಿಗೆ ತಿಳಿಸಿ ಅವರು ಒಪ್ಪಿದ ಮೇರೆಗೆ ಅವರನ್ನು ಜೊತೆಯಲ್ಲಿ ಕರೆದುಕೊಂಡು ಕಟ್ನವಾಡಿ ಮಹದೇಶ್ವರ

ದೇವಸ್ಥಾನದ ಹತ್ತಿರ ಮರೆಯಾಗಿ ಜೀಪನ್ನು ನಿಲ್ಲಿಸಿ, ಮರೆಯಾಗಿ ನಿಂತು ನೋಡಲಾಗಿ ಒಬ್ಬ ಅಸಾಮಿಯು ಒಂದು ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ನಿಂತಿರುವುದು ಕಂಡುಬಂದ ಮೇರೆಗೆ ನಮಗೆ ಅನುಮಾನ ಬಂದು ಸಿಬ್ಬಂದಿಗಳು ಹಾಗೂ ಪಂಚರೊಡನೆ ಸುತ್ತುವರೆದು ಆತನನ್ನು ಹಿಡಿದು, ಆತನ ಹೆಸರು ವಿಳಾಸ ಕೇಳಲಾಗಿ ಪಳನಿಸ್ವಾಮಿ ಬಿನ್ ರಾಮಬೋವಿ, 57 ವರ್ಷ, ಬೋವಿ ಜನಾಂಗ, ಕಟ್ನವಾಡಿ ಗ್ರಾಮ ಎಂದು ತಿಳಿಸಿದನು. ಆರೋಪಿ ವಶದಲ್ಲಿದ್ದ ಪ್ಲಾಸ್ಟಿಕ್ ಚೀಲ ತೆರೆದು ನೋಡಲಾಗಿ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 40 ಟೆಟ್ರಾ ಪ್ಯಾಕ್‌ಗಳಿದ್ದವು. ಸದರಿ ಅಸಾಮಿಗೆ ಟೆಟ್ರಾ ಪ್ಯಾಕ್ ಗಳನ್ನು ಇಡಲು ರಹದಾರಿ ಮತ್ತು ಪರವಾನಗಿ ಕೇಳಲಾಗಿ ನನ್ನ ಬಳಿ ಯಾವುದೇ ರಹದಾರಿ ಮತ್ತು ಪರವಾನಗಿ ಹೊಂದಿಲ್ಲ ಎಂದು ಹೇಳಿದನು. ಇವುಗಳನ್ನು ಹೆಚ್ಚಿನ ಬೆಲೆಗೆ ಮಾರಟ ಮಾಡಿ ಲಾಭಗಳಿಸಲು ತೆಗೆದುಕೊಂಡು ಬಂದೆ ಎಂದು ತಿಳಿಸಿದನು. ಪ್ರತಿ ಟೆಟ್ರಾ ಪ್ಯಾಕ್ ಮೇಲೆ MRP 35.17 ರೂ. ನಮೂದಾಗಿರುತ್ತದೆ. ಈ ಎಲ್ಲಾ ಟೆಟ್ರಾ ಪ್ಯಾಕ್ ಗಳ ಒಟ್ಟು ಮೌಲ್ಯ ರೂ.1406/- ಆಗಿರುತ್ತದೆ. ನಂತರ ಪಂಚರ ಸಮಕ್ಷಮ ಪಂಚನಾಮೆ ಬರೆದು ಟೆಟ್ರಾ ಪ್ಯಾಕ್‌ಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ 'J' ಎಂಬ ಅಕ್ಷರದಿಂದ ಸೀಲು ಮಾಡಲಾಯಿತು. ಸ್ಥಳದಲ್ಲಿ ಸಂಜೆಃ 5.00 ರಿಂದ 6.30 ರವರೆಗೆ ಪಂಚನಾಮೆ ಬರೆದು ಅಸಾಮಿ ಮತ್ತು ಮಾಲನ್ನು ವಶಕ್ಕೆ ಪಡೆದು ಠಾಣೆಗೆ ವಾಪಸ್ ಬಂದಿರುತ್ತೇವೆ. ಸ್ಥಳ ಪಂಚನಾಮೆಯನ್ನು ನಿಪಿ-1 ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. 40 ಟೆಟ್ರಾ ಪ್ಯಾಕ್‌ಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ. ಅವುಗಳನ್ನು ಒಟ್ಟಾಗಿ ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಬಿಳಿ ಚೀಲವನ್ನು ಈಗಾಗಲೇ ಮು.ಮಾ-2 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

ಸಿ.ಸಿಃ 1636/2022 ಫ್ರಾಸಾ–05, ಚಾಸಾ–04

**<u>ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಸಿ.ವಿ.ಆರ್. ವಕೀಲರಿಂದಃ</u>**

ನಾನು ಕಟ್ಟವಾಡಿ ಗ್ರಾಮದ ಊರಿನ ಹೊರಗಡೆ ಇದ್ದೆ. ಅದು ಉಗನೇದಹುಂಡಿ ಗ್ರಾಮಕ್ಕೆ ಹೋಗುವ ರಸ್ತೆಗೆ ತಲುಪುತ್ತದೆ. ಮಾಹಿತಿದಾರರು ಅಸಾಮಿ ಹೆಸರು ಮತ್ತು ಆತನ ಚಹರೆಯನ್ನು ತಿಳಿಸಿದರು. ಅದನ್ನು ನಿಪಿ–1 ಮತ್ತು 2ರಲ್ಲಿ ನಮೂದು ಮಾಡಿಲ್ಲ ಎನ್ನುವುದು ನಿಜ. ನಿಪಿ–1ರಲ್ಲಿ ಮೂರು ಕಡೆ ರಸ್ತೆ ಬರೆದಿದ್ದಾರೆ ಎನ್ನುವುದು ನಿಜ. ನಾವು ನೋಡಿದ ಆಸಾಮಿ ದೇವಸ್ಥಾನದ ಮುಂದುಗಡೆ ನಿಂತುಕೊಂಡಿದ್ದ. ಅಲ್ಲಿ ಸಾರ್ವಜನಿಕರು ಇದ್ದರು. ಪಂಚರ ಸಾಕ್ಷಿಗಳು ಕಟ್ಟವಾಡಿ ಗ್ರಾಮಕ್ಕೆ ಹೋಗುತ್ತಿದ್ದರು. ಮು.ಮಾ–1ರ ಮೇಲೆ ತಯಾರು ಮಾಡಿದ ಸಂಖ್ಯೆ, ಬ್ಯಾಚ್ ಸಂಖ್ಯೆ ಹಾಗೂ ಕ್ರಮ ಸಂಖ್ಯೆ ಪ್ರತ್ಯೇಕವಾಗಿ ನಮೂದು ಇದೆ ಎನ್ನುವುದು ನಿಜ. ನಿಪಿ–1ರಲ್ಲಿ ತಯಾರು ಮಾಡಿದ ಸಂಖ್ಯೆ, ಬ್ಯಾಚ್ ಸಂಖ್ಯೆ ಹಾಗೂ ಕ್ರಮ ಸಂಖ್ಯೆ ಪ್ರತ್ಯೇಕವಾಗಿ ನಮೂದು ಮಾಡಿಲ್ಲ ಎನ್ನುವುದು ನಿಜ. ಮು.ಮಾ–1ರ ಮೇಲಿರುವ ಚೀಟಿಯನ್ನು ಸ್ಥಳದಲ್ಲೇ ಅಂಟಿಸಿದೆವು. ಮು.ಮಾ–1ರ ಅಪರಾಧ ಸಂಖ್ಯೆ ನಮೂದು ಇದೆ ಎನ್ನುವುದು ನಿಜ. ಆರೋಪಿಗೂ ಮುದ್ದೆಮಾಲಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಖಾಲಿ ಪೌಚ್ ಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿ ಮಹದೇಶ್ವರ ದೇವಸ್ಥಾನದ ಹತ್ತಿರ ನಿಂತಿದ್ದು ಸುಳ್ಳು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿದ್ದು ಸುಳ್ಳು ಎಂದರೆ ಸರಿಯಲ್ಲ. ಕೇಸಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ನಾನು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನ್ಯಾಯಾಲಯದಲ್ಲಿ ಪ್ರಥಮವಾಗಿ ನೋಡುತ್ತಿದ್ದು ಅದಕ್ಕೂ ಮೊದಲು

ಎಲ್ಲೂ ನೋಡಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆಗಾಗಿ ಸೃಷ್ಠಿ ಮಾಡಿದ್ದು ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.